| ಕಾರ್ಯಕ್ರಮ | ಬಿ.ಎ. |
|---|---|
| ಸೆಮಿಸ್ಟರ್ | ತೃತೀಯ |
| ಪತ್ರಿಕೆ | ಕನ್ನಡ ಸೊಲ್ಲರಿಮೆ ಭಾಗ-1 |
| ವಿಷಯ | ಐಚ್ಛಿಕ ಕನ್ನಡ |
| ವಿಶ್ವವಿದ್ಯಾನಿಲಯ | ಕುವೆಂಪು ವಿಶ್ವವಿದ್ಯಾನಿಲಯ, ಶಂಕರಘಟ್ಟ |
| ಅವಧಿ | 1 |

# ಕಲಿಕೆಯ ಉದ್ದೇಶಗಳು

- ಪ್ರತಿಯೊಂದು ವಿಷಯಕ್ಕೂ ಅದರದೇ ಆದ ಇತಿಹಾಸವಿರುತ್ತದೆ..
- ಬದಲಾದ ಕಾಲಘಟ್ಟ, ಬದಲಾದ ಭಾಷಾ ನಿಯಮಗಳಿಗೆ ಸಂಬಂಧಿಸಿದ ಕೃತಿಗಳ ಪರಿಚಯ
- ಕನ್ನಡ ವ್ಯಾಕರಣ ಮೇಲೆ ಅನ್ಯಭಾಷಾ ವ್ಯಾಕರಣಗಳ ಪ್ರಭಾವ ಮತ್ತು ಪರಿಣಾಮಗಳು.
- ಭಾಷೆಯ ಸೊಲ್ಲರಿಮೆಯನ್ನು ತಿಳಿದುಕೊಳ್ಳಲು ಇರಬಹುದಾದ ವಿವಿಧ ಸೊಲ್ಲರಿಮೆ ಪದ್ಧತಿಗಳ ಪರಿಚಯ

# ಕನ್ನಡ ಸೊಲ್ಲರಿಮೆಯ ಸ್ವರೂಪ
## ಘಟಕ-7

## ಹೊಸಗನ್ನಡದಲ್ಲಿ ಸೊಲ್ಲರಿಮೆಯ ಗ್ರಂಥಗಳು

## ಮತ್ತು

## ಸೊಲ್ಲರಿಮೆಯ ಅಧ್ಯಯನದ ಕ್ರಮಗಳು

# ಹೊಸಗನ್ನಡದಲ್ಲಿ ಸೊಲ್ಲರಿಮೆಯ ಗ್ರಂಥಗಳು

- ಹೊಸಗನ್ನಡ ಸೊಲ್ಲರಿಮೆಯ ಕೃತಿಗಳ ಅನಿವಾರ್ಯತೆ.
- 19ನೆಯ ಶತಮಾನದಲ್ಲಿ ಕನ್ನಡ ವ್ಯಾಕರಣಗಳು ಹೆಚ್ಚಿನ ಪ್ರಮಾಣದಲ್ಲಿ ರಚನೆಯಾದವು.
- ವಿಲಿಯಂ ಕೇರಿ ‘ ಎ ಗ್ರಾಮರ್ ಆಫ್ ದಿ ಕರ್ನಾಟಕ ಲ್ಯಾಂಗ್ವೇಜ್ (1817), ಜಾನ್ ಮೆಕರಲ್ ಎಂಬುವನು ‘ ಎ ಗ್ರಾಮರ್ ಆಫ್ ದಿ ಕರ್ನಾಟಕ ಲ್ಯಾಂಗ್ವೇಜ್’(1820) ಎಂಬ ಕೃತಿಗಳನ್ನು ರಚಿಸಿದರು.

• ಕ್ರಿ.ಶ.1830ರಲ್ಲಿ ಶ್ರೀರಂಗ ಪಟ್ಟಣದ ಕೃಷ್ಣಮಾ ಚಾರ್ಯರ 'ಹೊಸಗನ್ನಡ ನುಡಿಗನ್ನಡಿಯೆಂಬ ಹೊಸಗನ್ನಡ ವ್ಯಾಕರಣವು' ಕನ್ನಡದಲ್ಲಿ ರಚಿತವಾದ ಮೊಟ್ಟ ಮೊದಲ ಹೊಸಗನ್ನಡ ವ್ಯಾಕರಣ.
• 19ನೇ ಶತಮಾನದಲ್ಲಿ 'ಶಬ್ಧಮಣಿ ದರ್ಪಣ ಸಂಪಾದಿಸಿದ ಕಿಟೆಲ್‌ರವರು ' ಕನ್ನಡ ವ್ಯಾಕರಣ ಸೂತ್ರಗಳು', 'ಸಂಕ್ಷೇಪ ವ್ಯಾಕರಣ ಸೂತ್ರಗಳು' ಕನ್ನಡದಲ್ಲಿ ರಚಿಸಿದರು.
• 1903ರಲ್ಲಿ ಕಿಟೆಲ್‌ರವರ ' ಎ ಗ್ರ್ಯಾಮರ್ ಆಫ್ ದಿ ಕನ್ನಡ ಲಾಂಗ್ವೇಜ್' ಎಂಬ ಇಂಗ್ಲೀಷ್ ಕೃತಿ ರಚಿತವಾಯಿತು.

- 1914 ರಲ್ಲಿ ಹೆರಾಲ್ಡ್ ಸ್ಪೆನ್ಸರನ ‘ ಎ ಕ್ಯಾನರೀಸ್ ಗ್ರ್ಯಾಮರ್’ ಎಂಬ ಕೃತಿ ಪ್ರಕಟವಾಯಿತು. ಇಂಗ್ಲೀಷರು ಕನ್ನಡ ಕಲಿಯಲು ಬಳಸುವ ಉತ್ತಮ ವ್ಯಾಕರಣ ಎಂಬ ಹೆಗ್ಗಳಿಕೆ ಈ ಕೃತಿಯದು.
- ನಂತರದ ಆಧುನಿಕ ಯುಗದಲ್ಲಿ ಶೈಕ್ಷಣಿಕ ಉದ್ದೇಶಕ್ಕಾಗಿ ಹಲವಾರು ಕೃತಿಗಳು ರಚನೆಯಾದವು. 1928ರಲ್ಲಿ ಮ.ಪ್ರ. ಪೂಜಾರ ‘ ಕನ್ನಡ ನುಡಿಗನ್ನಡಿ ಮತ್ತು ಛಂದೋಮಂಜರಿ’ಪ್ರಕಟ.

- ಆಧುನಿಕ ಯುಗದಲ್ಲಿ ಬಿ. ಮಲ್ಲಪ್ಪನವರ ‘ಶಬ್ದಾದರ್ಶ(1930),1936ರಲ್ಲಿ ಪಂಜೆ ಮಂಗೇಶ ರಾಯರ ‘ಕನ್ನಡ ಮೂಲ ವ್ಯಾಕರಣ’ ಪ್ರಕಟಣೆ ಗೊಂಡವು.
- , ಎ.ಎನ್. ನರಸಿಂಹಯ್ಯನವರ ‘ ಕನ್ನಡ ಪ್ರಥಮ ವ್ಯಾಕರಣ (1949), ತೀ.ನಂ.ಶ್ರೀಯ ರವರ ‘ಕನ್ನಡ ಮಧ್ಯಮ ವ್ಯಾಕರಣ’(1956) ರಚನೆಯಾದವು.
- ಸಂಸ್ಕøತ, ಲ್ಯಾಟಿನ್ ಹಾಗೂ ಇಂಗ್ಲೀಷನ ಪ್ರಭಾವದಿಂದ ಬಂದ ಸೊಲ್ಲರಿಮೆಯ ಗ್ರಂಥಗಳು ಕನ್ನಡದ್ದೇ ಆದ ವ್ಯಾಕರಣ ಪರಂಪರೆಯನ್ನು ಕಟ್ಟಿಕೊಡಲು ಸಾಧ್ಯವಾಗಲಿಲ್ಲ.

- ಇದನ್ನು ಅರಿತು ಡಿ.ಎನ್.ಶಂಕರಭಟ್ಟರು ಭಿನ್ನದಾರಿಯಲ್ಲಿ ನಡೆದು ಕನ್ನಡ ಸೊಲ್ಲರಿಮೆಯ ಗ್ರಂಥಗಳನ್ನು ರಚಿಸಿದರು.
- ಇವರ ಜೊತೆಗೆ ಎಚ್.ಎಸ್.ಬಿಳಿಗಿರಿ, ಡಾ. ಕೆ.ವಿ.ನಾರಾಯಣ, ಡಾ. ಬಿ.ಬಿ.ರಾಜಪುರೋಹಿತ ಮೊದಲಾದ ವಿದ್ವಾಂಸರು ಈ ದಿಸೆಯಲ್ಲಿ ಚಿಂತಿಸಿದ್ದಾರೆ.
- ಡಾ. ಡಿ,ಎನ್.ಶಂಕರಭಟ್ಟರು ವ್ಯಾಕರಣಕ್ಕೆ ಸೊಲ್ಲರಿಮೆ ಎಂಬ ಪದವನ್ನು ಬಳಸಿ ಕನ್ನಡ ವ್ಯಾಕರಣ ಪರಂಪರೆಯಲ್ಲಿ ಸಂಸ್ಕøತದ ನಿಯಮಗಳು ಹೇಗೆ ತುಂಬಿಕೊಂಡಿದೆ ಎಂದು ವಿಮರ್ಶಿಸಿದ್ದಾರೆ.
- .

- ತಮ್ಮ ವಿಚಾರಗಳ ಪ್ರತಿಪಾದನೆಗೆ ಹಲವಾರು ಕೃತಿಗಳನ್ನು ರಚಿಸಿದ್ದಾರೆ.
- ಅದರಲ್ಲಿ ಕನ್ನಡಕ್ಕೆ ಬೇಕು ಕನ್ನಡದ್ದೇ ವ್ಯಾಕರಣ, ಕನ್ನಡ ವ್ಯಾಕರಣ ಯಾರಿಗೆ ಬೇಕು, ಕನ್ನಡ ಸರ್ವನಾಮಗಳು ಮುಖ್ಯವಾದವು
- ಎಚ್. ಎಸ್. ಬಿಳಿಗಿರಿಯವರ ಆಲೋಕ ಭಾಗ-1, ಡಾ.ಕೆ.ವಿ.ನಾರಾಯಣ ಅವರ ಭಾಷೆ ಸುತ್ತಮುತ್ತ, ಕನ್ನಡ ಜಗತ್ತು- ಅರ್ಧ ಶತಮಾನ ಮೊದಲಾದ ಕೃತಿಗಳು ಗಮನಾರ್ಹವಾದುದು.
- ಈ ಕೃತಿಗಳು ಕನ್ನಡ ಸೊಲ್ಲರಿಮೆಯನ್ನು ಸಂಸ್ಕೃತಕ್ಕಿಂತ ಭಿನ್ನವಾಗಿ ಕಟ್ಟಿಕೊಡಲು ನಿರ್ದೇಶಿಸುತ್ತದೆ.

# ಸೊಲ್ಲರಿಮೆಯ ಅಧ್ಯಯನ ಕ್ರಮಗಳು

- ಸಾಂಪ್ರದಾಯಿಕ ಸೊಲ್ಲರಿಮೆ: ಭಾಷೆಯಲ್ಲಿ ಸಾಂಪ್ರದಾಯಿಕ ವ್ಯಾಕರಣ ಪದ್ಧತಿ ಅಳವಡಿಕೆ
- ಐತಿಹಾಸಿಕ ಸೊಲ್ಲರಿಮೆ: ಬದಲಾದ ಭಾಷೆಯ ಸ್ವರೂಪವನ್ನು ಅಧ್ಯಯನ ಮಾಡುವುದು
- ತೌಲನಿಕ ಸೊಲ್ಲರಿಮೆ: ಸೋದರ ಭಾಷೆಗಳ ಸೊಲ್ಲರಿಮೆಯನ್ನು ಹೋಲಿಸಿ ಅಧ್ಯಯನ ನಡೆಸುವುದು
- ಬೋಧನಾತ್ಮಕ ಸೊಲ್ಲರಿಮೆ: ಬೋಧಿಸಲು ಅನುಕೂಲವಾದ ಸೊಲ್ಲರಿಮೆ
- ವಿವರಣಾತ್ಮಕ ಸೊಲ್ಲರಿಮೆ:ವರ್ಣನಾತ್ಮಕ ಸೊಲ್ಲರಿಮೆ

- ಕೇಶೀರಾಜನ ಶಬ್ಧಮಣಿ ದರ್ಪಣ ವಿವರಣಾತ್ಮಕ ಪದ್ಧತಿಯ ಒಂದು ಮಾದರಿ.
- ಈ ಪದ್ಧತಿ ಭಾಷೆ ಅಥವಾ ಉಪಭಾಷೆಯ ವರ್ಣವಿಚಾರ, ಪದ ವಿಚಾರ ಮತ್ತು ವಾಕ್ಯ ವಿಚಾರಗಳ್ಳು ವಿವರಿಸುತ್ತದೆ.
- ಭಾಷೆಯ ಸೊಲ್ಲರಿಮೆಯನ್ನು ತಿಳಿದುಕೊಳ್ಳಲು ಇದು ಪರಿಣಾಮಕಾರಿಯಾಗಿದೆ.
- ವಿಶ್ಲೇಷಣಾತ್ಮಕ ಮಾದರಿಯೂ ಈ ಮಾದರಿಯ ಜೊತೆಗೆ ಬೆಳೆಯುತ್ತಿದೆ.

# ಸಾರಂಶ

- ಆಧುನಿಕ ಕಾಲಘಟ್ಟದಲ್ಲಿ ಹೊಸಗನ್ನಡ ಸೊಲ್ಲರಿಮೆ ಕೃತಿಗಳು ಅತ್ಯಂತ ಅವಶ್ಯಕ.
- ಹೊಸಗನ್ನಡದ ಪ್ರಾರಂಭಿಕ ಕಾಲಘಟ್ಟದಲ್ಲಿ ಕಾವ್ಯ ರಚನೆ ಮಾಡಿದವರಲ್ಲಿ ಪಾಶ್ಚಾತ್ಯರೇ ಹೆಚ್ಚು.
- ಕನ್ನಡದ ತಮ್ಮದೇ ವ್ಯಾಕರಣಕ್ಕಾಗಿ ನುಡಿಯರಿಗರ ಅವಿರತ ಪ್ರಯತ್ನ.
- ಭಾಷೆಯನ್ನು ಕಾಲದ ಬದಲಾವಣೆಗೆ ತಕ್ಕ ಹಾಗೆ ಅಧ್ಯಯನ ಮಾಡಲು ಐತಿಹಾಸಿಕ, ಸಾಂಪ್ರದಾಯಿಕ ಮುಂತಾದ ಪದ್ಧತಿಗಳ ಅವಶ್ಯಕತೆ

1. ಎ ಗ್ರಾಮರ್ ಆಫ್ ದಿ ಕರ್ನಾಟಕ ಲ್ಯಾಂಗ್ವೇಜ್- ಕೃತಿಯನ್ನು ರಚಿಸಿದವರು

ಅ) ವಿಲಿಯಂ ಕೇರಿ

ಆ) ಜಾನ್ ಮೆಕರಲ್

ಇ) ಕಿಟೆಲ್

ಈ) ಪಂಜೆ ಮಂಗೇಶರಾಯರು

ಉತ್ತರ: ಅ) ವಿಲಿಯಂ ಕೇರಿ

2. ಕನ್ನಡದ ಮೊಟ್ಟಮೊದಲ ಹೊಸಗನ್ನಡ ವ್ಯಾಕರಣ

ಅ) ಕನ್ನಡ ನುಡಿಗನ್ನಡಿ ಮತ್ತು ಛಂದೋಮಂಜರಿ

ಆ) ಹೊಸಗನ್ನಡ ನುಡಿಗನ್ನಡಿಯೆಂಬ ಹೊಸಗನ್ನಡ ವ್ಯಾಕರಣವು

ಇ) ಕನ್ನಡ ಮೂಲ ವ್ಯಾಕರಣ

ಈ) ಕನ್ನಡ ಮಧ್ಯಮ ವ್ಯಾಕರಣ

ಉತ್ತರ: ಆ) ಹೊಸಗನ್ನಡ ನುಡಿಗನ್ನಡಿಯೆಂಬ ಹೊಸಗನ್ನಡ ವ್ಯಾಕರಣವು

3. ವ್ಯಾಕರಣಕ್ಕೆ ಕನ್ನಡದಲ್ಲಿ ಸೊಲ್ಲರಿಮೆ ಪದವನ್ನು ಬಳಸಿದವರು

ಅ) ಡಿ. ಎನ್. ಶಂಕರಭಟ್ಟರು

ಆ) ಡಾ. ಕೆ.ವಿ.ನಾರಾಯಣ

ಇ) ಎಚ್.ಎಸ್.ಬಿಳಿಗಿರಿ

ಈ) ಡಾ. ಬಿ.ಬಿ.ರಾಜಪುರೋಹಿತ

ಉತ್ತರ:ಅ) ಡಿ. ಎನ್. ಶಂಕರಭಟ್ಟರು

4. ಭಾಷೆಗಳ ವರ್ಗೀಕರಣದ ಸಂದರ್ಭದಲ್ಲಿ ಬಳಸುವ ಸೊಲ್ಲರಿಮೆ

ಅ) ಸಾಂಪ್ರದಾಯಿಕ ಸೊಲ್ಲರಿಮೆ
ಆ)ವರ್ಣನಾತ್ಮಕ ಸೊಲ್ಲರಿಮೆ
ಇ)ತೌಲನಿಕ ಸೊಲ್ಲರಿಮೆ
ಈ) ಐತಿಹಾಸಿಕ ಸೊಲ್ಲರಿಮೆ

ಉತ್ತರ: ಇ)ತೌಲನಿಕ ಸೊಲ್ಲರಿಮೆ

5. ಶಬ್ಧಮಣಿದರ್ಪಣ ---- ಸೊಲ್ಲರಿಮೆ ಪದ್ಧತಿ

ಅ)ಸಂಪ್ರದಾಯಿಕ ಸೊಲ್ಲರಿಮೆ ಪದ್ಧತಿ
ಆ)ಬೋಧನಾತ್ಮಕ ಸೊಲ್ಲರಿಮೆ ಪದ್ಧತಿ
ಇ)ತೌಲನಿಕ ಸೊಲ್ಲರಿಮೆ ಪದ್ಧತಿ
ಈ)ವಿವರಣಾತ್ಮಕ ಸೊಲ್ಲರಿಮೆ ಪದ್ಧತಿ

ಉತ್ತರ: ಈ)ವಿವರಣಾತ್ಮಕ ಸೊಲ್ಲರಿಮೆ ಪದ್ಧತಿ